ಕಥೆ

# ಸಶೇಷ



**ಎಚ್.ಆರ್. ರಮೇಶ**

ಕಲೆ: ಎಸ್.ವಿ. ಹೂಗಾರ್

ಕಾರಣ ನಾನು ನಿನ್ನನ್ನು ವಿರೋಧಿಸುತ್ತಿಲ್ಲ, ನನಗೆ ನಿನ್ನ ಮೇಲೆ ಕಾಳಜಿ, ಪ್ರೀತಿ ಇರುವುದರಿಂದ ಮತ್ತು ಅವು ನಿನ್ನ ಜೊತೆ ಏನನ್ನು ಬೇಕಾದರೂ ಮಾತಾಡುವ ಮುಕ್ತತೆಯನ್ನು ಕೊಟ್ಟಿರುವುದರಿಂದಾಗಿ ಹೇಳ್ತಾ ಇದೀನಿ. ಪ್ಲೀಸ್, ಆ ರೀತಿ ಯೋಚಿಸಬೇಡ. ನಿನ್ನ ಮಾತನ್ನು ಒಪ್ಪಬಹುದಾದರೂ ಆ ರೀತಿ ಮಾಡುವ ಅನಿವಾರ್ಯತೆ ಇಲ್ಲ ನಮಗೆ. ಹಾಗೆಲ್ಲ ಮಾಡಬೇಡ. ನಾವು ಅಂದರೆ ಕೇವಲ ನಾವು ಅಷ್ಟೇನಾ? ನಾನು ಎನ್ನುವುದು ನಾನು ಆದರೆ ಅದನ್ನು ರೂಪಿಸಿರುವ ಸೃಷ್ಟಿಯ ವಿಸ್ಮಯತೆ, ಜೀವಪ್ರಜ್ಞೆ, ಸಮಾಜ, ಕುಟುಂಬ, ಮೌಲ್ಯ, ಆಚರಣೆ, ನಂಬಿಕೆ, ತಿಳಿವಳಿಕೆ, ಪ್ರಕೃತಿಯ ಅಸಂಖ್ಯ ಸಂಗತಿಗಳು – ಅವುಗಳಿಂದ ನಾನು ಎನ್ನುವುದು, ವಾಸ್ತವವಾಗಿ ನಾನು ಎನ್ನುವುದು ಎಲ್ಲಿದೆ, ಈ ಎಲ್ಲವುಗಳಿಂದ ನಾವು ಯಾವುದನ್ನು ಬಿಟ್ಟು ಯಾವುದೂ ಇಲ್ಲ! ನಿನಗೆ ಮಾತ್ರ ಸ್ವಾಭಿಮಾನ, ಸ್ವಂತಿಕೆ, ಇರೋದಾ? ಇವುಗಳ ನಡುವೆಯೇ ನಮ್ಮತನ ಎನ್ನುವುದು. ನಾವು ಕುಟುಂಬವನ್ನು ಇಡೀಯಾಗಿ ನೋಡಬೇಕು ಅಲ್ವಾ?

ನನಗೆ ನನ್ನ ಸ್ವಂತಿಕೆ, ಸ್ವಾತಂತ್ರ್ಯ ಎಲ್ಲಿದೆ ಹೇಳು ಇಲ್ಲಿ? ಈ ಅಲ್ಪ ಕಾಲದ ಬದುಕಿನಲ್ಲಿ ನಾನು ಎನ್ನುವುದು ಫೀಲ್ ಆಗದಿದ್ದರೆ ಬದುಕು ನಿಷ್ಪ್ರಯೋಜಕ. ನನ್ನ ಬದುಕನ್ನ ನಾನು ಕಟ್ಟಿಕೊಳ್ಳುವುದಕ್ಕೆ ಅವಕಾಶ ಇಲ್ಲ. ನಾನು ಯಾಕೆ ಇರಬೇಕು ಇಲ್ಲಿ ಎನ್ನಿಸುತ್ತಿದೆ.



ಕುಟುಂಬದಲ್ಲಿ ಪ್ರತಿಯೊಬ್ಬರೂ ತಾವು ಯಾಕೆ